MAY 18, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

- **‘ಆಪರೇ ’ನ್ ಸಿಂಧೂರ್’**; ಸೇನಾ ಪಡೆಗಳ ಪರಾಕ್ರಮ ಸ್ಮರಿಸಿ, ಉಗ್ರವಾದ ಖಂಡಿಸಿ, ತಿರಂಗಾ ಯಾತ್ರೆ.
- **ಹೈನೋದ್ಯಮ ಸಖಿಯರ ಗೌರವ ಧನ**, ಹೆಚ್ಚಿಸುವಂತೆ, ಕೇಂದ್ರ ಸರ್ಕಾರಕ್ಕೆ, ಮನವಿ.
- **ಬೆಂಗಳೂರಿನ, ನ್ಯಾ ’ನಲ್ ಗ್ಯಾಲರಿ ಆಫ್** ಮಾಡರ್ನ್ ಆರ್ಟ್ಸ್ ವೀಕ್ಷಣೆಗೆ, ಇಂದು ಉಚಿತ ಪ್ರವೇಶ.
- **ಧಾರವಾಡ, ಮನೋಹರ ಗ್ರಂಥಮಾಲೆಯ ಸಂಪಾದಕ**, ರಮಾಕಾಂತ ಜೋಶಿ, ನಿಧನ.

<><><>

**‘ಆಪರೇ ’ನ್ ಸಿಂಧೂರ್’ ಯಶಸ್ವಿಯಾದ** ಹಿನ್ನೆಲೆ, ಸೇನಾ ಪಡೆಗಳ ಪರಾಕ್ರಮವನ್ನು ಸ್ಮರಿಸಿ, ಉಗ್ರವಾದವನ್ನು ಖಂಡಿಸಿ, ಕೊಪ್ಪಳದಲ್ಲಿ ಬಿಜೆಪಿ ನೇತೃತ್ವದಲ್ಲಿ, ತಿರಂಗಾ ಯಾತ್ರೆ ಹಾಗೂ ಯೋಧರಿಗೆ ನಮನ ಕಾರ್ಯಕ್ರಮ ನಡೆಯಿತು. ತೊಗಲು ಬೊಂಬೆಯಾಟದ, ಅಂತಾರಾಷ್ಟ್ರೀಯ ಕಲಾವಿದೆ, ಪದ್ಮಶ್ರೀ ಭೀಮವ್ವ ಸಿಳ್ಳೇಖ್ಯಾತ ಅವರು, ರಾಷ್ಟ್ರ ಧ್ವಜವನ್ನು ತೋರಿ, ಜಾಥಾಕ್ಕೆ ಚಾಲನೆ ನೀಡಿದರು.

<><><>

**ರಾಷ್ಟ್ರ ರಕ್ಷಣೆಗಾಗಿ ನಾಗರಿಕರ ಸಮಿತಿಯಿಂದ**, ಬಳ್ಳಾರಿ ನಗರದ ಪ್ರಮುಖ ರಸ್ತೆಗಳಲ್ಲಿ, ತಿರಂಗಾ ಯಾತ್ರೆ ನಡೆಯಿತು. ಮಾಜಿ ಸೈನಿಕರು, ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.

<><><>

**‘ತಿರಂಗಾ ಯಾತ್ರೆ’**, ವಿಜಯನಗರ ಜಿಲ್ಲೆ ಹೊಸಪೇಟೆಯ, ಐತಿಹಾಸಿಕ ಶ್ರೀ ವಡಕರಾಯ ದೇವಸ್ಥಾನದಿಂದ, ಬಿ.ಆರ್. ಅಂಬೇಡ್ಕರ್ ವೃತ್ತದ ವರೆಗೆ ಸಾಗಿತು.

<><><>

**ರಾಷ್ಟ್ರ ರಕ್ಷಣಾ ಸಮಿತಿ**, ರಾಯಚೂರಿನಲ್ಲಿ ಆಯೋಜಿಸಿದ್ದ, ತಿರಂಗಾ ಯಾತ್ರೆಯಲ್ಲಿ, ಸಾರ್ವಜನಿಕರು ಪಾಲ್ಗೊಂಡು, ಯಶಸ್ವಿಗೊಳಿಸಿದರು.

<><><>

**ಧಾರವಾಡ ಜಿಲ್ಲೆ**, ವಾಯು ಸೇನೆಯ ವೀರ ಸೇನಾನಿಗಳ ಸಂಘದ ವತಿಯಿಂದ, ಇಂದು ಬೆಳಗ್ಗೆ 9 ಗಂಟೆಗೆ, ಆಪರೇಷನ್ ಸಿಂಧೂರ್ ಗಾಗಿ, ಯೋಧರನ್ನು ಅಭಿನಂದಿಸಿ, ತಿರಂಗಾ ಯಾತ್ರೆ ಜರುಗಲಿದೆ. ಗಡಿ ದೇವರ ಗುಡಿ, ಕಾರ್ಗಿಲ್ ಸ್ತೂಪದಲ್ಲಿ ಸಮಾವೇಶಗೊಳ್ಳಲಿದೆ ಎಂದು, ಏರ್ ಕಮೋಡೋರ್ ಸಿ.ಎಸ್. ಹವಾಲ್ದಾರ ತಿಳಿಸಿದ್ದಾರೆ.

<><><>

**ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರಿಗೆ**, ಸಾವಿರ ರೂಪಾಯಿ ಹಾಗೂ ಸಹಾಯಕಿಯರಿಗೆ 750 ರೂಪಾಯಿ ಗೌರವ ಧನ ಹೆಚ್ಚಿಸಲಾಗಿದೆ ಎಂದು, ಗೃಹ ಖಾತೆ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ. ತುಮಕೂರಿನ, ನಗರ ಕೇಂದ್ರ ಗ್ರಂಥಾಲಯದ ಸಭಾಂಗಣದಲ್ಲಿ, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ, ನೇಮಕಾತಿ ಆದೇಶ ನೀಡಿ, ಅವರು ಮಾತನಾಡಿದರು.

<><><>

**ಗರ್ಭಿಣಿಯರ ಆರೋಗ್ಯ ಸುಧೃಡತೆಗಾಗಿ**, ಕೇಂದ್ರ ಸರ್ಕಾರ ಜಾರಿಗೊಳಿಸಿದ, ‘ಇಂಟಿಗ್ರೇಶನ್ ಚೈಲ್ಡ್ ಡೆವಲಪ್‌ಮೆಂಟ್ ಯೋಜನೆ’ ಯನ್ನು ಜಾರಿಗೊಳಿಸಲಾಗಿದೆ ಎಂದು, ಸಚಿವ ಪರಮೇಶ್ವರ ಹೇಳಿದರು.

<><><>

**ರಾಜ್ಯದಲ್ಲಿ ಒಟ್ಟು 4 ಸಾವಿರದ** 199 ಅಂಗನವಾಡಿಗಳಿದ್ದು, 3 ಸಾವಿರದ 3 ನೂರಾ 78 ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿವೆ.

<><><>

**ರಾಜ್ಯಾದ್ಯಂತ, ಪಶುಪಾಲನಾ ಇಲಾಖೆಯ,** ಶಿಥಿಲಗೊಂಡ ಕಟ್ಟಡಗಳನ್ನು ಗುರುತಿಸಲಾಗಿದೆ; ಆದ್ಯತೆಯ ಮೇರೆಗೆ, ಇನ್ನೂರು ಸ್ಥಳಗಳಲ್ಲಿ, ನೂತನ ಕಟ್ಟಡಗಳ ನಿರ್ಮಾಣ ಹಾಗೂ ಮೂಲ ಸೌಕರ್ಯಗಳನ್ನು ಒದಗಿಸಲು, ಕ್ರಮ ಕೈಗೊಳ್ಳಲಾಗಿದೆ ಎಂದು, ಪಶು ಸಂಗೋಪನಾ ಖಾತೆ ಸಚಿವ, ಕೆ. ವೆಂಕಟೇಶ ತಿಳಿಸಿದ್ದಾರೆ. ಶಿವಮೊಗ್ಗ ಜಿಲ್ಲೆ, ಭದ್ರಾವತಿಯ ರಂಗಪ್ಪ ವೃತ್ತದ ಸಮೀಪ, 50 ಲಕ್ಷ ರೂಪಾಯಿ ಅಂದಾಜು ವೆಚ್ಚದ, ನೂತನ ಪಶು ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ, ಶಂಕುಸ್ಥಾಪನೆ ನೆರವೇರಿಸಿ, ಅವರು ಮಾತನಾಡಿದರು. ಅತ್ಯಾಧುನಿಕ ಪಾಲಿ ಕ್ಲಿನಿಕ್ ವ್ಯವಸ್ಥೆಗೆ ಪೂರಕವಾದ ಪರಿಕರಗಳನ್ನು ಈಗಾಗಲೇ ಸರಬರಾಜು ಮಾಡಲಾಗಿದೆ. ಕೇಂದ್ರ ಪುರಸ್ಕೃತ ಯೋಜನೆ ಅಡಿ, ಹೈನೋದ್ಯಮವನ್ನು ಉತ್ತೇಜಿಸಲು ಶ್ರಮಿಸುತ್ತಿರುವ, ಸಖಿಯರ ಸಹಾಯ ಧನವನ್ನು 5 ಸಾವಿರ ರೂಪಾಯಿಗಳಿಗೆ ಹೆಚ್ಚಿಸುವಂತೆ, ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾಗಿ ಸಚಿವರು, ಹೇಳಿದರು.

<><><>

**ಪ್ರತಿ ವರ್ಷ ದೂರದ ಮಂಗೋಲಿಯಾದಿಂದ, 50 ಸಾವಿರಕ್ಕೂ** ಹೆಚ್ಚು ಪಟ್ಟೆ ತಲೆಯ ಬಾತು, ಬಾರ್ ಹೆಡ್ಡೆಡ್ ಗೀಸ್, ರಾಜ್ಯಕ್ಕೆ ವಲಸೆ ಬರುತ್ತಿದ್ದವು. ಈ ಬಾರಿ ರಾಜ್ಯದ ಬೀದರ್, ಗದಗ, ಮೈಸೂರು, ವಿಜಯನಗರ, ರಾಯಚೂರು, ಹಾವೇರಿ, ದಾವಣಗೆರೆ, ಕೊಪ್ಪಳ ಹಾಗೂ ಬಾಗಲಕೋಟೆ ಜಿಲ್ಲೆಗಳ ಜೌಗು ಪ್ರದೇಶಗಳಲ್ಲಿ, ಅರಣ್ಯ ಇಲಾಖೆಯ ಸಹಯೋಗದಲ್ಲಿ, ಜನ ವಿಜ್ಞಾನ ಸ್ವಯಂಸೇವಕರು ಸಮೀಕ್ಷೆ ಕೈಗೊಂಡಿದ್ದು, ಹೆಬ್ಬಾತುಗಳ ವಲಸೆಯಲ್ಲಿ, ಶೇಕಡ 34 ದಶಾಂಶ 4ರಷ್ಟು ಕುಸಿತ ಕಂಡು ಬಂದಿದ್ದಾಗಿ, ಅಧ್ಯಯನ ವರದಿ ಸಲ್ಲಿಸಿದ್ದಾರೆ.

<><><>

**ಜಾಗತಿಕ ತಾಪಮಾನದಲ್ಲಿ ಏರುಪೇರು,** ಅಕಾಲಿಕ ಮಳೆ ಹಾಗೂ ಗಾಳಿಯ ಒತ್ತಡ, ಸೂಕ್ತ ಸಮಯದಲ್ಲಿ ಮಳೆಯಾಗದೇ ಬಿತ್ತನೆ ಕಾರ್ಯದಲ್ಲಿ ವಿಳಂಬ, ಹೆಬ್ಬಾತುಗಳ ವಲಸೆಗೆ, ಗಂಭೀರ ಪರಿಣಾಮ ಬೀರುತ್ತಿವೆ ಎಂದು, ವರದಿ ತಿಳಿಸಿದೆ.

<><><>

**ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ** ಮಾಹಿತಿ ನೀಡಿದ್ದಾರೆ, ಗದಗ ಜಿಲ್ಲೆ ನರಗುಂದದ ಜೀವವೈವಿಧ್ಯ ಸಂಶೋಧಕ ಮಂಜುನಾಥ ನಾಯಕ.

<><><>

**ಬೆಂಗಳೂರಿನ, ನ್ಯಾ 'ನಲ್ ಗ್ಯಾಲರಿ ಆಫ್ ಮಾಡರ್ನ್** ಆರ್ಟ್ಸ್ ವತಿಯಿಂದ, ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ಪಾಕ್ಷಿಕವನ್ನು, ಈ ತಿಂಗಳ 31ರ ವರೆಗೆ ಆಚರಿಸಲಾಗುತ್ತಿದೆ. ಎರಡು ವಾರಗಳ ಕಾಲ ನಡೆಯುವ ಈ ಆಚರಣೆ, ವಸ್ತು ಸಂಗ್ರಹಾಲಯಗಳಲ್ಲಿ ಸಮುದಾಯದ ಭಾಗವಹಿಸುವಿಕೆ, ಸಾಂಸ್ಕೃತಿಕ ವಾರಸುದಾರಿಕೆ ಬಗ್ಗೆ ಜನ ಜಾಗೃತಿ ಮತ್ತು ಸಮಾಜದಲ್ಲಿ ವಸ್ತು ಸಂಗ್ರಹಾಲಯಗಳು ವಹಿಸುವ ಪ್ರಮುಖ ಪಾತ್ರವನ್ನು, ಪ್ರಚುರ ಪಡಿಸಲಾಗುತ್ತಿದೆ. ಇಂದು, ಬೆಂಗಳೂರಿನ, ನ್ಯಾ 'ನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ಸ್ ವೀಕ್ಷಿಸಲು, ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶ ಒದಗಿಸಲಾಗಿದೆ.

<><><>

**ಧಾರವಾಡ ಜಿಲ್ಲೆ ಕಾರ್ಯನಿರತ ಪತ್ರಕರ್ತರ ಸಂಘ** ಪ್ರಕಟಿಸಿರುವ, 100 ಜನ ಹಿರಿಯ ಪತ್ರಕರ್ತರ ವ್ಯಕ್ತಿತ್ವ ಹಾಗೂ ಕೃತಿತ್ವ ದರ್ಶನ ಕೃತಿ, 'ಉತ್ತರದ ಸಾಲು ದೀಪಗಳು', ಮಲ್ಲಿಕಾರ್ಜುನ ಸಿದ್ದಣ್ಣವರ ಸಂಪಾದಕತ್ವದಲ್ಲಿ, ಸಿದ್ಧಗೊಂಡಿದೆ. ಇಂದು ಬೆಳಗ್ಗೆ 11.15ಕ್ಕೆ, ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಸಭಾಂಗಣದಲ್ಲಿ, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ.ಪಾಟೀಲ, ಕೃತಿ ಬಿಡುಗಡೆ ಮಾಡಲಿದ್ದು, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಗಣ್ಯರು, ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. 'ಉತ್ತರದ ಸಾಲು ದೀಪಗಳು' ಕೃತಿಯ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿರಿಯ ಪತ್ರಕರ್ತ ಮಲ್ಲಿಕಾರ್ಜುನ ಸಿದ್ದಣ್ಣವರ.

<><><>

**ಧಾರವಾಡದ, ಮನೋಹರ ಗ್ರಂಥಮಾಲೆಯ** ಸಂಪಾದಕ, ಡಾಕ್ಟರ್ ರಮಾಕಾಂತ ಜೋಶಿ, ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಯಲ್ಲಿ, ವಯೋಸಹಜ ಕಾಯಿಲೆಯಿಂದ ನಿನ್ನೆ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು. ಮನೋಹರ ಗ್ರಂಥ ಮಾಲೆಯ ವ್ಯವಸ್ಥಾಪಕರಾಗಿ, ಆಂಗ್ಲ ಭಾಷಾ ಪ್ರಾಧ್ಯಾಪಕರಾಗಿ, ಲೇಖಕರಾಗಿ ರಮಾಕಾಂತ ಜೋಶಿ, ಖ್ಯಾತಿವೆತ್ತಿದ್ದರು.

<><><>

**ಇಂದು ಬೆಳಗ್ಗೆ 9 ರಿಂದ 10 ಗಂಟೆಯ ವರೆಗೆ,** ಧಾರವಾಡದ ಮಂಗಳವಾರ ಪೇಟೆಯ, ಮೆಣಸಿನಕಾಯಿ ಓಣಿಯ, ಅವರ ಸ್ವಗೃಹದಲ್ಲಿ, ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

<><><>

**ಪಾರ್ಥಿವ ಶರೀರದ ಅಂತ್ಯಕ್ರಿಯೆ,** ಇಂದು ಬೆಳಗ್ಗೆ 10.30ಕ್ಕೆ ಗಂಟೆಗೆ, ಧಾರವಾಡದ ಹೊಸಯಲ್ಲಾಪುರ ರುದ್ರಭೂಮಿಯಲ್ಲಿ ನಡೆಯಲಿದೆ. ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

**ಹುಬ್ಬಳ್ಳಿಯ ನವನಗರದ,** ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, 11ನೇ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ, ವಿಶ್ವವಿದ್ಯಾಲಯದ, ಕಾನೂನು ಶಾಲೆ ಸಭಾಂಗಣದಲ್ಲಿ, ಇಂದು ಸಂಜೆ 4 ಗಂಟೆಗೆ, ಸಮಾರೋಪಗೊಳ್ಳಲಿದೆ. ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ರವಿ ಹೊಸಮನಿ, ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು, ಉಪ ಕುಲಪತಿ ಸಿ. ಬಸವರಾಜು, ತಿಳಿಸಿದ್ದಾರೆ.

<><><>

**‘ಬುದ್ಧ ನಸುನಕ್ಕ’ ಎಂಬ** ಕೋಡ್‌ನೊಂದಿಗೆ, 1974ರ ಈ ದಿನ, ಪ್ರಥಮ ಬಾರಿಗೆ ಭಾರತ, ಪ್ರಥಮ ಅಣ್ವಸ್ತ್ರ ಪರೀಕ್ಷೆ ಕೈಗೊಂಡು, ಜಾಗತಿಕವಾಗಿ, ಅಣ್ವಸ್ತ್ರ ಹೊಂದಿದ 6ನೇ ರಾಷ್ಟ್ರವಾಗಿ, ಹೊಮ್ಮಿತು.

<><><>

**ಅಂತಾರಾಷ್ಟ್ರೀಯ ಮಕ್ಕಳ ಸಹಾಯವಾಣಿ** ದಿನದ ಹಿನ್ನೆಲೆ, ಉಡುಪಿ ಬಳಿ ಇಂದ್ರಾಳಿ ರೇಲ್ವೆ ನಿಲ್ದಾಣದಲ್ಲಿ, ರೇಲ್ವೆ ಚೈಲ್ಡ್ ಹೆಲ್ಪ್ ಡೆಸ್ಕನ್ನು, ಜಿಲ್ಲಾಧಿಕಾರಿ ಕೆ.ವಿದ್ಯಾಕುಮಾರಿ ಉದ್ಘಾಟಿಸಿದರು.

<><><>

**ರಾಜ್ಯ ವಿಜ್ಞಾನ, ತಂತ್ರಜ್ಞಾನ ಅಕಾದೆಮಿಗೆ,** ರಾಜಾಸಾಬ್, ಹುಲಿಕಲ್ ನಟರಾಜ್ ಹಾಗೂ ವಸುಂಧರಾ ಭೂಪತಿ ಸೇರಿದಂತೆ, 14 ಜನರನ್ನು ನಾಮನಿರ್ದೇಶನಗೊಳಿಸಿ, ವಿಜ್ಞಾನ–ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್.ಬೋಸರಾಜು, ಆದೇಶಿಸಿದ್ದಾರೆ.

<><><>

**ಕೊಡಗು ಜಿಲ್ಲೆ ಮಕ್ಕಂದೂರು ಗ್ರಾಮದಲ್ಲಿ,** ಅರೆಭಾಷಿಕರ ‘ಐನ್‌ಮನೆ’ ಕಾರ್ಯಕ್ರಮ, ಜರುಗಿತು.

<><><>

**ರಾಜ್ಯ ಮಹಿಳಾ ಆಯೋಗ ಅಧ್ಯಕ್ಷೆ** ನಾಗಲಕ್ಷ್ಮೀ ಚೌಧರಿ, ಕಲಬುರಗಿ ತಾಲೂಕು, ಹೊನ್ನಕಿರಣಗಿ ಗ್ರಾಮದಲ್ಲಿ, ನರೇಗಾ ಕೂಲಿ ಕಾರ್ಮಿಕ ಮಹಿಳೆಯರೊಂದಿಗೆ, ಸಂವಾದ ನಡೆಸಿದರು.

<><><>

**ರಾಜ್ಯ ಸರ್ಕಾರಿ ನೌಕರರ,** ರಾಜ್ಯ ಮಟ್ಟದ ಕ್ರೀಡಾಕೂಟ, ಇಂದು ಮತ್ತು ನಾಳೆ ಶಿವಮೊಗ್ಗದ ನೆಹರೂ ಕ್ರೀಡಾಂಗಣದಲ್ಲಿ ನಡೆಯಲಿದೆ. ಮುಖ್ಯಮಂತ್ರಿ ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದಾರೆ.

<><><>

**‘ವಿಶ್ವ ಅಧಿಕ ರಕ್ತದೊತ್ತಡ ದಿನಾಚರಣೆ’** ಶಿವಮೊಗ್ಗದ ಮೆಗ್ಗಾನ್ ಬೋಧನಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾಕ್ಟರ್ ತಿಮ್ಮಪ್ಪ ಹಾಗೂ ಗದಗನಲ್ಲಿ, ತಾಲೂಕು ಆರೋಗ್ಯಾಧಿಕಾರಿ ಡಾಕ್ಟರ್ ಪ್ರೀತ್ ಕೋನಾ ನೇತೃತ್ವದಲ್ಲಿ, ಜರುಗಿತು.

<><><>

- **‘ಆಪರೇ ’ನ್ ಸಿಂಧೂರ್’;** ಸೇನಾ ಪಡೆಗಳ ಪರಾಕ್ರಮ ಸ್ಮರಿಸಿ, ಉಗ್ರವಾದ ಖಂಡಿಸಿ, ತಿರಂಗಾ ಯಾತ್ರೆ.
- **ಹೈನೋದ್ಯಮ ಸಖಿಯರ ಗೌರವ ಧನ,** ಹೆಚ್ಚಿಸುವಂತೆ, ಕೇಂದ್ರ ಸರ್ಕಾರಕ್ಕೆ, ಮನವಿ.
- **ಬೆಂಗಳೂರಿನ, ನ್ಯಾ ’ನಲ್ ಗ್ಯಾಲರಿ ಆಫ್** ಮಾಡರ್ನ್ ಆರ್ಟ್ಸ್ ವೀಕ್ಷಣೆಗೆ, ಇಂದು ಉಚಿತ ಪ್ರವೇಶ.
- **ಧಾರವಾಡ, ಮನೋಹರ ಗ್ರಂಥಮಾಲೆಯ ಸಂಪಾದಕ,** ರಮಾಕಾಂತ ಜೋಶಿ, ನಿಧನ.

<><><>